ಎಲ್ ಎ ಸಿ  ನಂಬರ:-49 /2009

ಪಿ.ಢಬ್ಲೂ -:-1    : ಮಕಸೂದ ಅಫಜಲ ತಂದೆ ಕುರ್ಷಿದ ಅಫಜಲ ಜಾಗೀರದಾರ

ದಿನಾಂಕ:-  23-02-2026 ರಂದು ಸಾಕ್ಷಿಯನ್ನು  ಕರೆಯಿಸಿ ಪ್ರಮಾಣೀಕರಿಸಲಾಯಿತು.

***<u>ಮುಂದುವರೆದ ಮುಖ್ಯ ವಿಚಾರಣೆ:</u>***

ನಾನು ಸಹಾಯಕ ಆಯುಕ್ತರು ಮಾಡಿದ ಆದೇಶದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-೧೩ ಎಂದು ಗುರುತಿಸಲಾಯಿತು.

ನಾನು ತಹಶೀಲ್ದಾರರ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೧೪ ಎಮದು ಗುರುತಿಸಲಾಯಿತು.

ನಾನು ಸೂಚನಾ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೧೫ ಎಮದು ಗುರುತಿಸಲಾಯಿತು.

ನಾನು ಸಹಾಯಕ ಆಯುಕ್ತರ ಪತ್ರಗಳ ದೃಡಿಕೃತ ನಕಲನ್ನು  ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-೧೬ ರಿಂದ ನಿಪಿ-೧೮ ಎಂದು ಗುರುತಿಸಲಾಯಿತು.

ನಾನು ತಹಶೀಲ್ದಾರರಿಗೆ ಮತ್ತು ಸಹಾಯಕ ಆಯುಕ್ತರಿಗೆ ನೀಡಿದ ಪತ್ರದ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-೧೯ ರಿಂದ ನಿಪಿ-೨೧ ಎಂದು ಗುರುತಿಸಲಾಯಿತು.

ನಾನು ಸಹಾಯಕ ಆಯುಕ್ತರ ಆದೇಶದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೨೨ ಎಂದು ಗುರುತಿಸಲಾಯಿತು.

ನಾನು ಜಿಲ್ಲಾಧಿಕಾರಿಗಳ ಆದೇಶದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೨೩ ಎಮದು ಗುರುತಿಸಲಾಯಿತು.

ನಾನು ನಕ್ಷೆಯ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೨೪ ಎಂದು ಗುರುತಿಸಲಾಯಿತು.

ನಾನು ನನ್ನ ಜಮೀನಿನ ಮತ್ತು ನನ್ನ ಜಮೀನಿನ ಅಕ್ಕಪಕ್ಕದ ಜಾಗೆಯ ಪೋಟೋಗಳನ್ನು ಮತ್ತು ಸದರಿ ಪೋಟೋಗಳ ರಶೀದಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೨೫ ರಿಂದ ನಿಪಿ-೩೭ ಎಂದು ಗುರುತಿಸಲಾಯಿತು.

ನಾನು ಸಹಾಯಕ ಆಯುಕ್ತರಿಗೆ ಕಲಂ ೧೮ ರಡಿಯಲ್ಲಿ ಐತೀರ್ಪಿಗಿಂತ ಮುಂಚೆ ನೀಡಿದ ಅರ್ಜಿಯ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೩೮ ಎಂದು ಗುರುತಿಸಲಾಯಿತು.

ನಾನು ಸರ್ವೆ ನಂಬರ ೬ ರ ಎನ್ ಎ ಆದೇಶದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೩೯ ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಎ ಡಿ ಜಿ ಪಿ ರವರಿಂದ.

ಸರ್ವೆ ನಂಬರ ೬೦೬ ರಲ್ಲಿ ನ್ಯಾಯಾಲಯದ ಕಟ್ಟಡಕ್ಕಾಗಿ ನನ್ನ ೪ ಎಕರೆ ಜಮೀನು ಭೂಸ್ವಾಧೀನವಾಗಿರುತ್ತದೆ. ಸದರಿ ಜಮೀನುನಮಗೆ 1981-82 ರಲ್ಲಿ ಗ್ರ್ಯಾಂಟ್ ಆಗಿರುತ್ತದೆ. ನನಗೆ ಭೂಸ್ವಾಧೀನದ ಕುರಿತು ೪/೧ ಮತ್ತು ೬/೧ ಮತ್ತು ಇತರ ನೋಟಿಸುಗಳು ಮುಟ್ಟಿರುತ್ತವೆ. ನನ್ನ ಭೂಸ್ವಾಧೀನಗೊಂಡ ಜಮೀನಿನ ಪಕ್ಕದಲ್ಲಿ ಒಂದುಎಕರೆ ಜಮೀನು ಪಿಡಬ್ಲ್ಯೂ ಡಿ ಕಛೇರಿಗೆ ಅದೆ ಸಮಯದಲ್ಲಿ ನೀಡಿರುತ್ತೇನೆ. ಪಿಡಬ್ಲ್ಯೂ ಡಿ ಕಛೇರಿ ನಿರ್ಮಾಣ ಮಾಡಿದ ಜಮೀನಿನ ಪರಿಹಾರದ ಹಣ ನಮಗೆ ಕೊಟ್ಟಿಲ್ಲ. ನನಗೆ ಸದರಿ ಜಮೀನಿನ ಪರಿಹಾರದ ಹಣ ನೀಡಿರುವುದಿಲ್ಲ. ನಾನು ಅವಾರ್ಡ ಆದ ನಂತರ ಪರಿಹಾರ ಹಣ ಕಡಿಮೆ ಇದೆ ಎಂದು ಪ್ರೊಟೆಸ್ಟ ಅರ್ಜಿ ನೀಡಿರುತ್ತೇನೆ. ನನಗೆ ಒಪ್ಪಿಗೆಯಾಗುವಂತೆ ಸರಕಾರದವರು ಪರಿಹಾರದ ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ.

೨. ನನ್ನ ಭೂಸ್ವಾಧಿನಗೊಂಡ ಜಮೀನಿನ ಅಕ್ಕಪಕ್ಕದಲ್ಲಿ ನಮ್ಮ ಅಣ್ಣತಮ್ಮಂದಿರ ಜಮೀನುಗಳು ಇವೆ ಎಂದರೆ ಸರಿ. ನಮ್ಮ ಜಮೀನಿಗೆ ಹತ್ತಿಕೊಂಡು ರಾಜ್ಯ ಹೆದ್ದಾರಿ ಇದೆ ಎಂದರೆ ಸರಿ. ಆ ಸಮಯದಲ್ಲಿ ೧ ಪ್ಲಾಟಗೆ ರೂ.೨,೦೦,೦೦೦/- ಹಣ ಇತ್ತು ಎಂದರೆ ಸರಿ. ಈಗ ಒಂದು ಪ್ಲಾಟಗೆ ಅಲ್ಲಿ ೩೦ ರಿಂದ ೪೦ ಲಕ್ಷ ರೂ. ಬೆಲೆ ಇರುತ್ತದೆ. ನ್ಯಾಯಾಲಯದ ಕಟ್ಟಡ ಮಾಡುವಾಗ ಮಣ್ಣು ಪರೀಕ್ಷೆ ಮಾಡಿರುತ್ತಾರೆ

ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಜಮೀನು ಎನ್ ಎ ಪೊಟೆನ್ಶಿಯಲ್ ಇರುತ್ತದೆ ಎಂದು ವರದಿ ಪಡೆದುಕೊಂಡಿರುತ್ತಾರೆ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.